GULBARGA UNIVERSITY
"Jnana Ganga", Kalaburagi - 585 106, Karnataka, India. ☎ 08472-263202 Fax 08472-263206

ಕ್ರ.ಸಂ.ಗುವಿಕ/ಸಿ &ವಿವಿಪ/ಸಭೆ/2016-17/2030 ದಿನಾಂಕ:- 12-3-2017

ಗೆ,

ಗುಲಬರ್ಗಾ ವಿಶ್ವವಿದ್ಯಾಲಯದ ಎಲ್ಲಾ
ವಿದ್ಯಾವಿಷಯಕ್ ಪರಿಷತ್ ಸದಸ್ಯರುಗಳಿಗೆ,

ಮಾನ್ಯರೆ

ವಿಷಯ:- ದಿನಾಂಕ 15.03.2017 ರಂದು ಬೆಳಿಗ್ಗೆ 11.00 ಗಂಟೆಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕಾರ್ಯಸೌಧದಲ್ಲಿರುವ **"ರಾಧಾಕೃಷ್ಣ ಸಭಾಂಗಣ"** ದಲ್ಲಿ ಜರುಗುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಕಾರ್ಯಸೂಚಿ.

--

ದಿನಾಂಕ 15.03.2017 ರಂದು ಬೆಳಿಗ್ಗೆ 11.00 ಗಂಟೆಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕಾರ್ಯಸೌಧದಲ್ಲಿರುವ **"ರಾಧಾಕೃಷ್ಣ ಸಭಾಂಗಣ"**ದಲ್ಲಿ ಜರುಗುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಕಾರ್ಯಸೂಚಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

12/3/17
**ಕುಲಸಚಿವರು,**
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

ಅಡಕ:- ಕಾರ್ಯಸೂಚಿ.

**ಪ್ರತಿಗಳು ಮಾಹಿತಿಗಾಗಿ:**

1. ಕುಲಪತಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
2. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560 001.
3. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ವಿಶ್ವವಿದ್ಯಾಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001.
4. ಕುಲಸಚಿವರು (ಮೌಲ್ಯಮಾಪನ), ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
5. ಗ್ರಂಥಪಾಲಕರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
6. ಹಣಕಾಸು ಅಧಿಕಾರಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
7. ನಿರ್ದೇಶಕರು, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
8. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಗು.ವಿ. ಕಲಬುರಗಿ.
9. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
10. ನಿರ್ದೇಶಕರು, ದೂರ ಶಿಕ್ಷಣ ಕೇಂದ್ರ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ..
11. ಸ್ಥಳೀಯ ಅಭಿಯಂತರರು, ಗು.ವಿ. ಕಲಬುರಗಿ.
12. ವಿಶೇಷಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, "ಜ್ಞಾನ ತುಂಗಾ" ಯರಗೇರಾ, ರಾಯಚೂರು,
13. ವಿಶೇಷಾಧಿಕಾರಿಗಳು, ಸ್ನಾತಕೋತ್ತರ ಕೇಂದ, ಹಾಲಹಳ್ಳಿ, ಬೀದರ
14. ನೋಡಲ್ ಆಫೀಸರ್, ಅಂಕಿ-ಸಂಖ್ಯೆ ಘಟಕ, ಗು.ವಿ. ಕಲಬುರಗಿ.
15. ಮುಖ್ಯಸ್ಥರು, ಗಣಕಯಂತ್ರ ಕೇಂದ್ರ, ಪರೀಕ್ಷಾ ವಿಭಾಗ ಆವರಣ, ಗು.ವಿ. ಕಲಬುರಗಿ.
16. ಎಲ್ಲಾ ಉಪಕುಲಸಚಿವರು: ಸಹಾಯಕ ಕುಲಸಚಿವರು, ಗು.ವಿ. ಕಲಬುರಗಿ.
17. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ, ಆಪ್ತ ಸಹಾಯಕರು, ಗು.ವಿ. ಕಲಬುರಗಿ.
18. ವಿತ್ತಾಧಿಕಾರಿಗಳ ಆಪ್ತ ಸಹಾಯಕ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
19. ಕಚೇರಿ ಕಡತಕ್ಕೆ.

ದಿನಾಂಕ **15.03.2017** ರಂದು ಬೆಳಿಗ್ಗೆ **11.00** ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಸೌಧದಲ್ಲಿರುವ "ರಾಧಾಕೃಷ್ಣ ಸಭಾಂಗಣ"ದಲ್ಲಿ ಜರುಗುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಕಾರ್ಯಸೂಚಿ.

ವಿಷಯ ಕ್ರಮಾಂಕ (1)

ದಿನಾಂಕ 22.10.2016 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆ, ದಿನಾಂಕ 11.11.2016ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆ ಹಾಗೂ ದಿನಾಂಕ 8.12.2016ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ ಸಭೆಗಳ ನಡೆವಳಿಗಳ ದೃಢೀಕರಣ

ವಿಷಯ ಕ್ರಮಾಂಕ (2)

ದಿನಾಂಕ 26.04.2016 ರಂದು ಜರುಗಿದ ಸಾಮಾನ್ಯ ಸಭೆ , ದಿನಾಂಕ 20.07.2016ರಂದು ಜರುಗಿದ ಸಾಮಾನ್ಯ ಸಭೆ ಹಾಗೂ ದಿನಾಂಕ 26.09.2016ರಂದು ಜರುಗಿದ ಅಸಾಮಾನ್ಯ ಸಭೆಗಳ ನಡೆವಳಿಗಳ ಮೇಲೆ ತೆಗೆದುಕೊಂಡ ಕ್ರಮದ ವರದಿ.

ವಿಷಯ ಕ್ರಮಾಂಕ (3)

ವಿಷಯ:- 2017-18 ನೇ ಸಾಲಿಗಾಗಿ ಸ್ನಾತಕ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯಗಳ ಹೊಸ/ಪ್ರವೇಶ ಸಂಖ್ಯೆ/ಮುಂದುವರಿಕೆ ಸಂಲಗ್ನತೆಗಾಗಿ ಸ್ಥಾನಿಕ ವಿಚಾರಣಾ ಸಮಿತಿಗಳ ವರದಿಯ ಬಗ್ಗೆ.

ಉಲ್ಲೇಖ:- 1 ಅಧಿಸೂಚನೆ ಸಂಖ್ಯೆ ಗುವಿಕ/ವಿಮವಿ/ಸಂಲಗ್ನತೆ/2016-17/1967 ದಿನಾಂಕ 06.10.2016

2. ಕಚೇರಿ ಆದೇಶ ಸಂಖ್ಯೆ ಗುವಿಕ/ವಿಮವಿ/ಸಂಲಗ್ನತೆ/2016-17/2507 ದಿನಾಂಕ 25.02.2017

**ಟಿಪ್ಪಣಿ:**

ಗುಲಬರ್ಗಾ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ನಾತಕ ಹಾಗೂ ಸ್ನಾತಕೋತ್ತರ ಮಹಾವಿದ್ಯಾಲಯಗಳ 2017-18 ನೇ ಶೈಕ್ಷಣಿಕ ಸಾಲಿನ ಹೊಸ/ಪ್ರವೇಶ ಸಂಖ್ಯೆ/ ಮುಂದುವರಿಕೆಗಾಗಿ ಉಲ್ಲೇಖ(1)ರ ಅಧಿಸೂಚನೆಯನ್ವಯ ಪ್ರಸ್ತಾವನೆಗಳನ್ನು ಕರೆಯಲಾಗಿತ್ತು. ಸದರಿ ವಿಷಯಕ್ಕೆ ಸಂಬಂಧಿಸಿರುವಂತೆ ಮುಂದುವರಿಕೆ ಹಾಗೂ ಹೊಸ ಮಹಾವಿದ್ಯಾಲಯಗಳ ಸಂಲಗ್ನತೆಗಾಗಿ ಉಲ್ಲೇಖ (2)ರನ್ವಯ ರಚಿಸಲಾದ ಸ್ಥಾನಿಕ ವಿಚಾರಣಾ ಸಮಿತಿಗಳು ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ ವರದಿ ಸಲ್ಲಿಸಿದ್ದು, ಸದರಿ ಸ್ಥಾನಿಕ ವಿಚಾರಣಾ ಸಮಿತಿಗಳು ಸಲ್ಲಿಸಿರುವ ವರದಿಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ. 59(8) ರ ಅಡಿಯಲ್ಲಿ ಪರಿಶೀಲಿಸಿ ಸೂಕ್ತಕ್ರಮ ಜರುಗಿಸಲು ಈ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

ವಿಷಯ ಕ್ರಮಾಂಕ (4)

ವಿಷಯ:- ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಯಲ್ಲಿ ಪ್ರವೇಶ ಪರೀಕ್ಷೆ ಜಾರಿಗೊಳಿಸುವ ಕುರಿತು.

ಉಲ್ಲೇಖ:-1. ಸಂ.ಗುವಿಗು/ವಿಮವಿ/ಬಿ.ಓ.ಎಸ್./2013-14/1051 ದಿನಾಂಕ 24.09.2013

2. ಕ್ರಮನಿಯಮಾವಳಿ ಸಮಿತಿ ಸಭೆ ಜರುಗಿದ ದಿನಾಂಕ 05.01.2017

**ಟಿಪ್ಪಣಿ:**

2017-18 ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಯಲ್ಲಿ ಪ್ರವೇಶ ಪರೀಕ್ಷೆಯನ್ನು ಅಳವಡಿಸಿಕೊಳ್ಳಬೇಕಾಗಿದ್ದು, ಈ ಕುರಿತು ದಿನಾಂಕ 05.01.2017 ರಂದು ಜರುಗಿದ ಕ್ರಮನಿಯಮಾವಳಿ ಪರಿಷ್ಕರಣಾ ಸಮಿತಿ ಸಭೆಯಲ್ಲಿ ಬಗ್ಗೆ ಈಗಾಗಲೇ ಜಾರಿಯಲ್ಲಿರುವ ಕ್ರಮನಿಯಮಾವಳಿಗಳಿಗೆ ಪ್ರವೇಶ ಪರೀಕ್ಷೆ ಜಾರಿಗೊಳಿಸುವ ಬಗ್ಗೆ ಹೊಸ ಪುರವಣಿ (Addendum) ಯೊಂದನ್ನು ಜೋಡಿಸಲು ನಿರ್ಧರಿಸಲಾಗಿದೆ. ಸಭೆಯ ನಡಾವಳಿಗಳು ಈ ಕೆಳಗಿನಂತಿವೆ.

**Resolution :**

a) Admission to the PG Courses (except MBA & MCA) shall be through Common Entrance Examination to be conducted by Gulbarga University.
b) Entrance Examination shall be for 100 Marks. There shall be 100 Multiple Choice questions and each question shall carry one mark and the duration of the Entrance Examination shall be two and half hours. There shall not be negative mark for wrong answer.
c) Syllabus for entrance examination for admission to the PG courses shall be prepared by the concerned Board of Studies and same shall be hoisted on the Gulbarga University Website.
d) For preparing the merit list, the performance of the candidate in the entrance examination only shall be taken.
e) Whenever two or more candidates secure same number of marks in the Entrance Examination, to break the tie and to prepare Inter-se merit aggregate percentage of marks in the qualifying examination shall be taken. In case still there is a tie final year / semester aggregate percentage of marks shall be taken to break the tie.

Same has to be sent to the Honorable Chancellor as an addendum to the existing Uniform Regulation Governing Admission to PG courses for approval.

ಈ ವಿಷಯವನ್ನು ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆಯೊಂದಿಗೆ ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಬೇಕಾಗಿದೆ.

ಆದ್ದರಿಂದ ನಡವಳಿಗಳನ್ನು ಅನುಮೋದನೆಗಾಗಿ ವಿದ್ಯಾವಿಷಯಕ ಸಭೆಯಲ್ಲಿ ಮಂಡಿಸಲಾಗಿದೆ.

**ವಿಷಯ ಕ್ರಮಾಂಕ (5)**

ವಿಷಯ:- 2017-18 ನೇ ಸಾಲಿನಲ್ಲಿ ಜರುಗಲಿರುವ ಸ್ನಾತಕೋತ್ತರ ಕೋರ್ಸುಗಳ ಪ್ರವೇಶ ಪರೀಕ್ಷೆಯ ಪಠ್ಯಕ್ರಮ ಅನುಮೋದಿಸುವ ಬಗ್ಗೆ.
ಉಲ್ಲೇಖ:- ನಿಕಾಯಗಳ ಸಭೆಯ ದಿನಾಂಕ 09 ಮತ್ತು 10.03.2017

ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ 2017-18 ನೇ ಸಾಲಿನಲ್ಲಿ ವಿವಿಧ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಗಾಗಿ ಪ್ರವೇಶ ಪರೀಕ್ಷೆಯನ್ನು ನಡೆಸಲು ಈಗಾಗಲೇ ತೀರ್ಮಾನಿಸಲಾಗಿದೆ. ಅದರಂತೆ ವಿವಿಧ ಅಧ್ಯಯನ ವಿಭಾಗಗಳು ಅಧ್ಯಯನ ಮಂಡಳಿಯಲ್ಲಿ ಮತ್ತು ವಿವಿಧ ನಿಕಾಯದ ಸಭೆಯಲ್ಲಿ ಅನುಮೋದಿಸಿ ಸ್ನಾತಕೋತ್ತರ ಕೋರ್ಸಿನ ಪ್ರವೇಶ ಪರೀಕ್ಷೆಯ ಪಠ್ಯಕ್ರಮವನ್ನು ಸಲ್ಲಿಸಿದ್ದು, ಸದರಿ ಪಠ್ಯಕ್ರಮವನ್ನು ಅನುಮೋದನೆಗಾಗಿ ವಿದ್ಯಾವಿಷಯಕ ಪರಿಷತ್‌ಗೆ ಮಂಡಿಸಲಾಗಿದೆ.

**ವಿಷಯ ಕ್ರಮಾಂಕ (6)**

ವಿಷಯ:- 2017-18 ನೇ ಸಾಲಿನಲ್ಲಿ ಜರುಗಲಿರುವ ಪಿಎಚ್.ಡಿ/ಎಂ.ಫಿಲ್ ಕೋರ್ಸುಗಳ ಪ್ರವೇಶ ಪರೀಕ್ಷೆಯ ಪಠ್ಯಕ್ರಮ ಅನುಸಮರ್ಥನೆಗಾಗಿ.
ಉಲ್ಲೇಖ:- ನಿಕಾಯಗಳ ಸಭೆಯ ದಿನಾಂಕ 09 ಮತ್ತು 10.03.2017

ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ 2017-18ನೇ ಸಾಲಿನಲ್ಲಿ ವಿವಿಧ ಪಿಎಚ್.ಡಿ/ಎಂ.ಫಿಲ್ ಕೋರ್ಸುಗಳ ಪ್ರವೇಶಾತಿಗಾಗಿ ಪ್ರವೇಶ ಪರೀಕ್ಷೆಯನ್ನು ನಡೆಸಲು ಈಗಾಗಲೇ ತೀರ್ಮಾನಿಸಲಾಗಿದೆ. ಅದರಂತೆ ವಿವಿಧ ಅಧ್ಯಯನ ವಿಭಾಗಗಳು ಅಧ್ಯಯನ ಮಂಡಳಿಯಲ್ಲಿ ಮತ್ತು ವಿವಿಧ ನಿಕಾಯದ ಸಭೆಯಲ್ಲಿ ಅನುಮೊದಿಸಿದ ಪಿಎಚ್.ಡಿ/ಎಂ.ಫಿಲ್ ಕೋರ್ಸಿನ ಪ್ರವೇಶ ಪರೀಕ್ಷೆಯ ಪಠ್ಯಕ್ರಮವನ್ನು ಸಲ್ಲಿಸಿದ್ದು, ಸದರಿ ಪಠ್ಯಕ್ರಮವನ್ನು ಅನುಸಮರ್ಥನೆಗಾಗಿ ವಿದ್ಯಾವಿಷಯಕ ಪರಿಷತ್‌ಗೆ ಮಂಡಿಸಲಾಗಿದೆ.

ವಿಷಯ ಕ್ರಮಾಂಕ (7)

ವಿಷಯ : 2016–17ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜು ಹಾಗೂ 2017–18ನೆ ಸಾಲಿನ ಆಯವ್ಯಯ ಅಂದಾಜು.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪರಿಚ್ಛೇದ 48ರನ್ವಯ ಗುಲಬರ್ಗಾ ವಿಶ್ವವಿದ್ಯಾಲಯದ 2016–17ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜು ಹಾಗೂ 2017–18ನೇ ಸಾಲಿನ ಆಯವ್ಯಯ ಅಂದಾಜು ವಿತ್ತಾಧಿಕಾರಿಗಳ ಸಹಾಯದೊಂದಿಗೆ ಸಿಂಡಿಕೇಟ ಸಭೆಯು ಸಿದ್ದಪಡಿಸಿ ಅನುಮೋದಿಸಿದ್ದು, ತದನಂತರ ಸದರಿ ಪ್ರಸ್ತಾವನೆಯನ್ನು ಹಣಕಾಸು ಸಮಿತಿಯು ಕೂಲಂಕುಷವಾಗಿ ಪರಿಶೀಲಿಸಿ ಅನುಮೋದಿಸಿದೆ.

ಆದ್ದರಿಂದ, ಸದರಿ ಪ್ರಸ್ತಾವನೆಯನ್ನು ವಿದ್ಯಾ ವಿಷಯಕ ಪರಿಷತ್ತಿಗೆ ಮಂಡಿಸಿದೆ.

ವಿಷಯ ಕ್ರಮಾಂಕ (8)

ವಿಷಯ: ವಿವಿಧ ಸ್ನಾತಕೋತ್ತರ ಕೋರ್ಸಿನ ಪರಿಷ್ಕೃತ ಪಠ್ಯಕ್ರಮ ಅನುಮೋದಿಸಿ 2017–18ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸುವ ಬಗ್ಗೆ.
ಉಲ್ಲೇಖ: ವಿವಿಧ ನಿಕಾಯಗಳ ಸಭೆಯ ದಿನಾಂಕ 9 & 10.03.2017.

ಟಿಪ್ಪಣಿ:
ಗುಲಬರ್ಗಾ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಕೋರ್ಸುಗಳ ಪಠ್ಯಕ್ರಮವನ್ನು ಆಯಾ ಅಧ್ಯಯನ ಮಂಡಳಿಗಳು ಪರಿಷ್ಕರಿಸಿ, ಸಂಬಂಧಿಸಿದ ನಿಕಾಯದ ಅನುಮೋದನೆ ಸಲ್ಲಿಸಿದ್ದು, ದಿನಾಂಕ 9 & 10.03.2017 ರಂದು ಜರುಗಿದ ನಿಕಾಯದ ಸಭೆಗಳಲ್ಲಿ ಈ ಕೆಳಕಾಣಿಸಿರುವ ಕೋರ್ಸುಗಳ ಪಠ್ಯಕ್ರಮಗಳನ್ನು ಕೂಲಂಕುಷವಾಗಿ ಚರ್ಚಿಸಿ ಅನುಮೋದಿಸಿ 2017–18ನೇ ಸಾಲಿನಿಂದ ಜಾರಿಗೊಳಿಸುವಂತೆ ನಿರ್ಣಯಿಸಲಾಗಿದೆ.

ಕಲಾ ನಿಕಾಯ

| ಕ್ರ.ಸಂ. | ಕೋರ್ಸಿನ ವಿವರ |
|---|---|
| 1. | ಸಂಸ್ಕೃತ |
| 2. | ಡಿಪ್ಲೊಮಾ ಇನ್ ಸಂಸ್ಕೃತ |
| 3. | ಕನ್ನಡ ಮತ್ತು ಜಾನಪದ |
| 4. | ಕನ್ನಡ, ವಚನ ಸಾಹಿತ್ಯ, ಶರಣ ಸಾಹಿತ್ಯ, |

| | |
|---|---|
| | ನಾಟಕ ಮತ್ತು ರಂಗಭೂಮಿ |
| 5. | ಹಿಂದಿ |
| 6. | ಮರಾಠಿ |
| 7. | ಉರ್ದು ಮತ್ತು ಪರ್ಶಿಯನ್ |
| 8. | ಇಂಗ್ಲೀಷ |
| 9. | ಸಂಗೀತ |
| 10. | ದೃಶ್ಯಕಲಾ |
| 11. | ಪಾಲಿ ಮತ್ತು ಬುದ್ಧಿಸ್ಟ್ ಸ್ಟಡೀಸ್ |

**ವಾಣಿಜ್ಯ ಮತ್ತು ನಿರ್ವಹಣೆ ನಿಕಾಯ:**

| ಕ್ರ.ಸಂ. | ಕೋರ್ಸಿನ ವಿವರ |
|---|---|
| 1. | ವಾಣಿಜ್ಯ |
| 2. | ಎಂ.ಬಿ.ಎ. |

**ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ:**

| ಕ್ರ.ಸಂ. | ಕೋರ್ಸಿನ ವಿವರ |
|---|---|
| 1. | ರಸಾಯನಶಾಸ್ತ್ರ |
| 2. | ಪ್ರಾಣಿಶಾಸ್ತ್ರ |
| 3. | ಭೌತಶಾಸ್ತ್ರ |
| 4. | ಸಸ್ಯಶಾಸ್ತ್ರ |
| 5. | ಸೂಕ್ಷ್ಮಜೀವಶಾಸ್ತ್ರ |
| 6. | ಗಣಿತ |
| 7. | ಜೀವರಸಾಯನಶಾಸ್ತ್ರ |
| 8. | ಜೈವಿಕತಂತ್ರಜ್ಞಾನ |
| 9. | ವಿದ್ಯುದ್ವಿಜ್ಞಾನ |
| 10. | ಮಟೆರಿಯಲ್ ಸೈನ್ಸ್ |
| 11. | ಪರಿಸರ ವಿಜ್ಞಾನ |
| 12. | ಸಕ್ಕರೆ ತಂತ್ರಜ್ಞಾನ |
| 13. | ಇನ್‌ಸ್ಟ್ರುಮೆಂಟೇಶನ್ ಟೆಕ್ನಾಲಜಿ |
| 14. | ಸಂಖ್ಯಾಶಾಸ್ತ್ರ |
| 15. | ಕಂಪ್ಯೂಟರ್ ಸೈನ್ಸ್ |

ಸಮಾಜವಿಜ್ಞಾನ ನಿಕಾಯ:

| ಕ್ರ.ಸಂ. | ಕೋರ್ಸಿನ ವಿವರ |
|---|---|
| 1. | ಸಮಾಜಶಾಸ್ತ್ರ |
| 2. | ರಾಜ್ಯಶಾಸ್ತ್ರ |
| 3. | ಮನೋವಿಜ್ಞಾನ |
| 4. | ಅರ್ಥಶಾಸ್ತ್ರ |
| 5. | ಸಮಾಜಕಾರ್ಯ |
| 6. | ಮಹಿಳಾ ಅಧ್ಯಯನ |
| 7. | ಇತಿಹಾಸ |
| 8. | ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ |
| 9. | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ |
| 10. | ಜರ್ನಾಲಿಸಂ ಆ್ಯಂಡ್ ಮಾಸ್ ಕಮ್ಯುನಿಕೇಷನ್ |

ಶಿಕ್ಷಣ ನಿಕಾಯ:

| ಕ್ರ.ಸಂ. | ಕೋರ್ಸಿನ ವಿವರ |
|---|---|
| 1. | ಶಿಕ್ಷಣ |
| 2. | ದೈಹಿಕ ಶಿಕ್ಷಣ |

ಕಾನೂನು ನಿಕಾಯ:

| ಕ್ರ.ಸಂ. | ಕೋರ್ಸಿನ ವಿವರ |
|---|---|
| 1 | ಸ್ನಾತಕೋತ್ತರ ಕಾನೂನು |

ಸದರಿ ವಿಷಯವನ್ನು ವಿದ್ಯಾವಿಷಯಕ ಪರಿಷತ್ತಿನ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

ವಿಷಯ ಕ್ರಮಾಂಕ (9)

ವಿಷಯ: 2016–17ನೇ ಶೈಕ್ಷಣಿಕ ಸಾಲಿಗಾಗಿ ಮುಂದುವರಿಕೆ ಸಂಲಗ್ನತೆ ನೀಡುವ ಕುರಿತು ಮರುತನಿಖೆ ಮಾಡುವ ಬಗ್ಗೆ.
ಉಲ್ಲೇಖ: ಸಂ. ಗುವಿಗು:ವಿಮವಿ:ಸಂಲಗ್ನತೆ: 2015–16:2772, ದಿನಾಂಕ 09.03.2017.

ಟಿಪ್ಪಣಿ:

2016–17ನೇ ಶೈಕ್ಷಣಿಕ ಸಾಲಿಗಾಗಿ ಈ ಕೆಳಗೆ ನಮೂದಿಸಿದ ಶಿಕ್ಷಣ ಮಹಾವಿದ್ಯಾಲಯಗಳಿಗೆ ಮುಂದುವರಿಕೆ ಸಂಲಗ್ನತೆ ನೀಡುವ ಕುರಿತು, ಮರುತನಿಖೆ ಮಾಡಿ, ಸ್ಥಾನಿಕ ವಿಚಾರಣಾ ಸಮಿತಿಯು ವರದಿಯನ್ನು ನೀಡಿದೆ.

I. ಇಸ್ಲಾಮಿಯಾ ಪದವಿ ಮಹಾವಿದ್ಯಾಲಯ, ಬಸವಕಲ್ಯಾಣ 2012–13 ಹಾಗೂ 2013–14ನೇ ಸಾಲಿನ ಮುಂದುವರಿಗೆ ಸಂಲಗ್ನತೆ (ಮರುತನಿಖೆ)
2. ಸಿದ್ಧಾರ್ಥ ಬಿ.ಎಡ್. ಕಾಲೇಜು, ಭಾಲ್ಕಿ (ಮರುತನಿಖೆ)
3. ಅಂಜನಾದೇವಿ ಬಿ.ಎಡ್. ಕಾಲೇಜು, ಹುಮನಾಬಾದ (ಮರುತನಿಖೆ)
4. ಡಾ. ಬಿ.ಆರ್. ಅಂಬೇಡ್ಕರ್ ಬಿ.ಪಿ.ಎಡ್. ಕಾಲೇಜು, ಹುಮನಾಬಾದ (ಮರುತನಿಖೆ)
5. ಇಂದಿರಾಗಾಂಧಿ ಬಿ.ಎಡ್. ಕಾಲೇಜು, ಕಲಬುರಗಿ (ನ್ಯಾಯಾಲಯದ ಆದೇಶದಂತೆ ವಿಶೇಷ ತನಿಖೆ)

ಆದ್ದರಿಂದ, ಸದರಿ ವಿಷಯವನ್ನು ವಿದ್ಯಾವಿಷಯಕ ಪರಿಷತ್ತಿನ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

17/3/17
ಕುಲಸಚಿವರು,
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.